This Question Paper consists of 33 questions and 11 printed pages.
ಈ ಪ್ರಶ್ನೆಪತ್ರಿಕೆಯಲ್ಲಿ 33 ಪ್ರಶ್ನೆಗಳಿದ್ದು 11 ಮುದ್ರಿತ ಪುಟಗಳನ್ನು ಹೊಂದಿದೆ.

**Roll No.**
ರೋಲ್ ನಂ.

| | | | | | | | | | | | |
|---|---|---|---|---|---|---|---|---|---|---|---|
| | | | | | | | | | | | |

Code No. **67/S/A/K**

**SET A**

# KANNADA
# ಕನ್ನಡ
# (208)

**Day and Date of Examination :**
**ಪರೀಕ್ಷೆಯ ದಿನ ಮತ್ತು ತಾರೀಖು** ____________________

**Signature of Invigilators :**
**ಉಸ್ತುವಾರಿದಾರರ ರುಜು** 1. ____________________

2. ____________________

**ಸಾಮಾನ್ಯ ಸೂಚನೆಗಳು :**

1. ಎಲ್ಲಾ ಪ್ರಶ್ನೆಗಳ ಉತ್ತರಗಳನ್ನು ನಿಮಗೆ ಕೊಟ್ಟಿರುವ ಉತ್ತರ ಪತ್ರಿಕೆಯಲ್ಲಿಯೇ ಬರೆಯಬೇಕು.
2. ಈ ಪ್ರಶ್ನೆ–ಪತ್ರಿಕೆಯನ್ನು ಓದಲು **15** ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ–ಪತ್ರಿಕೆಯು ಮಧ್ಯಾಹ್ನ **02.15** ಗಂಟೆಗೆ ಕೊಡಲಾಗುವುದು. **02.15** ರಿಂದ **02.30** ರ ಅವಧಿಯಲ್ಲಿ ವಿದ್ಯಾರ್ಥಿಗಳು ಪ್ರಶ್ನೆ–ಪತ್ರಿಕೆಯನ್ನು ಮಾತ್ರ ಓದಬೇಕು ಮತ್ತು ಈ ಸಮಯದಲ್ಲಿ ಉತ್ತರ–ಪತ್ರಿಕೆಯಲ್ಲಿ ಯಾವುದೇ ಉತ್ತರ ಬರೆಯಕೂಡದು.
3. ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.
4. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದು ಪರೀಕ್ಷಿಸಿ.
5. ವಸ್ತುನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C) ಅಥವಾ (D) ಯನ್ನು ಬರೆಯಬೇಕು.
6. ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.
7. ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್ ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನೂರ್ಜಿತಗೊಳಿಸಲಾಗುವುದು.
8. ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **67/S/A/K-A** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.



Unnati Educations
9899436384, 9654279279

# KANNADA
# ಕನ್ನಡ
# (208)

**Time : 3 Hours ]** **[ Maximum Marks : 100**

**ಸಮಯ : 3 ಗಂಟೆಗಳು ]** **[ ಗರಿಷ್ಠ ಅಂಕಗಳು : 100**

**ಸೂಚನೆ : ಆಂತರಿಕ ಆಯ್ಕೆ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರಶ್ನೆಗಳಿಗೆ ಕಡ್ಡಾಯವಾಗಿ ಉತ್ತರಿಸಿರಿ.**

ಮಲೆನಾಡಿನಲ್ಲಿ 'ಮೈಲಿ' ಎನ್ನುವುದು ಬಯಲು ಸೀಮೆಯ ದೊಡ್ಡಮ್ಮರೋಗ. ಬಯಲು ಸೀಮೆಯಲ್ಲಿಯೂ ಈ ರೋಗ ಬಂದರೆ ಪ್ರಾಣಕ್ಕೆ ಭಯವುಂಟು. ಮಲೆನಾಡಿನಲ್ಲಿ 'ಮೈಲಿ' ಎಂದರೆ ಪ್ರಾಣದ ಭಯ ಮಾತ್ರವಲ್ಲ, ಸಾವು ಕಟ್ಟಿಟ್ಟದ್ದು. ಹತ್ತು ಜನರಲ್ಲಿ ಒಬ್ಬರು ತಪ್ಪಿಸಿಕೊಳ್ಳಬಹುದು. ಆರೋಗ್ಯ ಅಧಿಕಾರಿಗಳ ವರದಿ ಕಂಡೊಡನೆ ನಾನು, ಆ ಜಾತ್ರೆ ನಡೆಯುವುದು ಬೇಡ, ಎಂದು ಅಪ್ಪಣೆ ಮಾಡಿದೆನು. ದೇವಾಲಯದ ಧರ್ಮದರ್ಶಿಗಳು, "ಜಾತ್ರೆಯಿಂದ ದೇವಾಲಯಕ್ಕೆ ವರ್ಷ ವರ್ಷವೂ ಒಳ್ಳೆ ವರಮಾನ ಇದೆ. ಜಾತ್ರೆ ನಡೆಯದಿದ್ದರೆ ದೇವರಿಗೆ ವರಮಾನ ಇಲ್ಲವಾಗುತ್ತದೆ. ವರ್ಷವೆಲ್ಲಾ ವಿಶೇಷವಾಗಿ ವೆಚ್ಚಕ್ಕೆ ಕಾಸಿಲ್ಲದೆ ಹೋಗುತ್ತದೆ. ಮೈಲಿ ಹರಡುತ್ತದೆ ಎನ್ನುವ ಅಪಾಯ ಇಲ್ಲ", ಎಂದು ಪ್ರಾರ್ಥನೆ ಕಳುಹಿಸಿದರು. ತಾಲೂಕು, ಸಬ್ ಡಿವಿಜನ್ ಮೂಲಕ ಇದು ನನಗೆ ಬಂದಿತು. ನಾನು, "ದೇವಸ್ಥಾನಕ್ಕೆ ವರಮಾನ ಕಡಿಮೆಯಾಗುತ್ತದೆ ಎಂಬ ಭಯಕ್ಕಾಗಿ ಮೈಲಿ ವ್ಯಾಧಿ ಹರಡಿದರೂ ಹರಡಲಿ ಎನ್ನಲಾರೆ. ದೇವಸ್ಥಾನಕ್ಕೆ ಬೇರೆ ರೀತಿಯಲ್ಲಿ ಹಣಬರುವಂತೆ ಯೋಚನೆ ಮಾಡಬಹುದು, ಜಾತ್ರೆ ನೆರೆದು ರೋಗ ಹರಡಿದರೆ, ಆ ಮೇಲಿನ ಪಶ್ಚಾತ್ತಾಪ ಅಸಹನೀಯ ಆದೀತು", ಎಂದು ತಿಳಿಸಿದೆನು. ಶ್ರೀ ಹೊಸಕೊಪ್ಪ ಕೃಷ್ಣರಾಯರು ಈ ವಿಷಯ ಪುನರಾಲೋಚನೆ ಮಾಡಬೇಕೆಂದು ನನಗೆ ಪತ್ರ ಬರೆದರು. ನಾನು, ಮೈಲಿ ಹರಡುವುದಿಲ್ಲ ಎಂದು ಯಾರು ಧೈರ್ಯ ಹೇಳಬಲ್ಲರು ? ಹರಡೀತು ಎನ್ನುವ ಭಯವಿರುವಾಗ ನಾನು ಪುನರಾಲೋಚನೆ ಏನು ಮಾಡಲಿ ಎಂದೆನು. ದೇವರಿಗೆ ವರಮಾನ ಇಲ್ಲದಂತೆ ಮಾಡಿದೆನೆಂದು ಈ ಜನರಿಗೆಲ್ಲ ಅಸಮಾಧಾನ.

ಕಡೂರಿಗೆ ಸಕ್ಕರೆ ಪಟ್ಟಣಕ್ಕೆ ಮಧ್ಯೆ ಒಂದು ದೊಡ್ಡ ಬೋರೆ, ಅಲ್ಲಿ ಒಂದು ಮಠ, ಮಠಕ್ಕೆ ಬಹಳ ವರಮಾನ ಇಲ್ಲ. ಸ್ವಾಮಿಗಳು ಸಜ್ಜನರು, ಯಾರೋ ಅವರಿಗೆ, "ಇಲ್ಲಿ ವರ್ಷದಲ್ಲಿ ಒಂದು ಎತ್ತಿನ ಜಾತ್ರೆ ನಡೆಸಿ, ಒಂದಷ್ಟು ವರಮಾನ ಬರುತ್ತದೆ", ಎಂದು ಸೂಚಿಸಿದರು. ಸ್ವಾಮಿಗಳ ಪರವಾಗಿ ಹತ್ತಿರದ ಗ್ರಾಮದ ಜನ ಸರಕಾರಕ್ಕೆ ಈ ಪ್ರಾರ್ಥನೆ ಸಲ್ಲಿಸಿದರು.

**1.** ಗದ್ಯಭಾಗವನ್ನು ಓದಿ ಅರ್ಥಮಾಡಿಕೊಂಡಿರುವ ಪ್ರಕಾರ ಈ ಕೆಳಕಂಡ ವಾಕ್ಯಗಳಿಗೆ ಸರಿ/ತಪ್ಪು ತಿಳಿಸಿ. (3ಕ್ಕೆ) **3x1=3**

(a) ಮಲೆನಾಡಿನಲ್ಲಿ 'ಮೈಲಿ' ಎಂದರೆ ಪ್ರಾಣದ ಭಯ ಮಾತ್ರವಲ್ಲ, ಸಾವು ಕಟ್ಟಿಟ್ಟದ್ದು.

(b) ಜಾತ್ರೆಯಿಂದ ದೇವಾಲಯಕ್ಕೆ ವರ್ಷ ವರ್ಷವೂ ಒಳ್ಳೆ ವರಮಾನ ಇಲ್ಲ.

(c) 'ಮೈಲಿ' ರೋಗಕ್ಕೆ ಇನ್ನೊಂದು ಹೆಸರು 'ದೊಡ್ಡಮ್ಮ ರೋಗ'.

(d) ಆರೋಗ್ಯ ಅಧಿಕಾರಿಗಳ ವರದಿ ಕಂಡೊಡನೆ ನಾನು ಜಾತ್ರೆ ನಡೆಯುವುದು ಬೇಡ, ಎಂದು ಅಪ್ಪಣೆ ಮಾಡಿದೆನು.

**2.** ಓದಿದ ಗದ್ಯಭಾಗಕ್ಕೆ ಸಂಬಂಧಿಸಿ ಕೆಳಗಿನ ಪ್ರಶ್ನೆಗಳಿಗೆ ಒಂದು 'ಪದ'ದಲ್ಲಿ ಉತ್ತರಿಸಿರಿ. (3ಕ್ಕೆ) **3x1=3**

(a) ಪುನರಾಲೋಚನೆ ಮಾಡಬೇಕೆಂದು ಯಾರು ಪತ್ರ ಬರೆದರು ?

(b) ದೇವರಿಗೆ ವರಮಾನ ಇಲ್ಲದಂತೆ ಮಾಡಿದೆನೆಂದು ಯಾರಿಗೆ ಅಸಮಾಧಾನ ?

(c) ಮಠ ಎಲ್ಲಿ ಇತ್ತು ?

(d) ಸ್ವಾಮಿಗಳ ಪರವಾಗಿ ಹತ್ತಿರದ ಗ್ರಾಮದ ಜನ ಸರಕಾರಕ್ಕೆ ಏನು ಸಲ್ಲಿಸಿದರು ?



Unnati Educations
9899436384, 9654279279

3. ಸೂಚಿಸಿದಂತೆ ಸರಿಯಾದ ಪದವನ್ನು ಆರಿಸಿ ಬರೆಯಿರಿ. (1ಕ್ಕೆ) 1x1=1

(i) "ಆರೋಗ್ಯ" ಈ ಪದದ ವಿರುದ್ಧ ಪದ :

(A) ರೋಗ್ಯ (B) ಅನಾರೋಗ್ಯ (C) ಸ್ವಸ್ತ (D) ನಿರೋಗ

(ii) "ಭಯ" ಈ ಪದದ ಸಮಾನಾರ್ಥಕ ಪದ :

(A) ಹೇಡಿ (B) ನಿರ್ಭಯ (C) ಅಂಜಿಕೆ (D) ನಡಗು

4. ಈ ಕೆಳಕಂಡ ಸಾಲುಗಳನ್ನು ಪರಾಮರ್ಶಿಸಿ, ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ. 5x1=5

ನೀವು 'ಸುಜಾತಾ' ದಾವಣಗೆರೆ ನಿವಾಸಿ ಎಂದು ಭಾವಿಸಿ ವಿಜಯವಾಣಿ ಪತ್ರಿಕೆಯ ಸಂಪಾದಕರಿಗೆ ಹಳ್ಳಿಗಳಲ್ಲಿ ಇರುವ ಕೆರೆಗಳನ್ನು ಸರಿಯಾಗಿ ಉಪಯೋಗಿಸುತ್ತಿಲ್ಲ ಕೆರೆಯಲ್ಲಿ ಸ್ನಾನ, ದನಗಳನ್ನು ಕೆರೆಯೊಳಗೆ ಬಿಟ್ಟು ಸ್ನಾನಮಾಡಿಸುವುದು, ಅಲ್ಲಿಯೇ ಬಟ್ಟೆ ಒಗೆಯುವುದು ಇದೆಲ್ಲ ಅನೇಕ ತರಹದ ರೋಗಗಳಿಗೆ ಕಾರಣವಾಗುತ್ತದೆ ಆದ್ದರಿಂದ ಸಂಬಂಧಪಟ್ಟವರು ಗಮನ ಹರಿಸುವಂತೆ ಮಾಡಲು ಒಂದು ಪತ್ರವನ್ನು ಬರೆಯಿರಿ.

(i) ಈ ಪತ್ರಕ್ಕೆ ಸರಿಯಾದ ವಿಷಯವನ್ನು ಆರಿಸಿ.

(A) ಕೆರೆಯ ನೀರು ಪೋಲಾಗುತ್ತಿದೆ

(B) ಕೆರೆ ಸುಂದರವಾಗಿ ಕಾಣಬೇಕು

(C) ಕೆರೆಯ ನೀರು ಸ್ವಚ್ಛವಾಗಿರಬೇಕು, ರೋಗ ಹರಡಬಾರದು

(D) ಹಳ್ಳಿಗರಿಗೆ ತೊಂದರೆಯಾಗಬೇಕು

(ii) ಈ ಕೆಳಕಂಡ ಅಪೂರ್ಣವಾಕ್ಯವನ್ನು ಪೂರ್ಣಗೊಳಿಸಿರಿ.

ನನ್ನ ಪತ್ರವು......... ಎಂದು ಭಾವಿಸುತ್ತೇನೆ.

(A) ಪತ್ರಿಕೆಯ ಸಂಪಾದಕರು ಸಂತೋಷ ಪಡುತ್ತಾರೆ

(B) ವಿಜಯವಾಣಿ ಪತ್ರಿಕೆಯ ಸಂಖ್ಯೆಯ ಹೆಚ್ಚಳಕ್ಕೆ

(C) ಹಳ್ಳಿಗರಿಗೆ ಜಾಗೃತಿ ಮೂಡಿಸಿ, ರೋಗಗಳನ್ನು ತಡೆಯಬಹುದು

(D) ರೋಗಗಳನ್ನು ಹೆಚ್ಚಿಸಬಹುದು

(iii) ಈ ಪತ್ರಕ್ಕೆ ಸುಜಾತಾ ಆಯ್ಕೆ ಮಾಡಿರುವ ಸಂಬಂಧಪಟ್ಟ ದೃಷ್ಟಿಕೋನ ಈ ರೀತಿ ಇದೆ :

(A) ಈ ಪತ್ರದಿಂದ ಒಳ್ಳೆಯ ಬಹುಮಾನ

(B) ಸಂಬಂಧಪಟ್ಟ ಗ್ರಾಮ ಪಂಚಾಯ್ತಿ ಅಧ್ಯಕ್ಷರು ಗಮನಿಸಿ ಶಿಸ್ತು ಕ್ರಮದಿಂದ ಕೆರೆಯನ್ನು ಶುದ್ಧವಾಗಿರಿಸುವರು

(C) ಹಳ್ಳಿಗರು ಬೇಸರಗೊಳ್ಳುವರು

(D) ಗ್ರಾಮ ಪಂಚಾಯ್ತಿಗೆ ಲಾಭವಾಗುತ್ತದೆ

(iv) ಕೆರೆಯ ಸ್ವಚ್ಛತೆಗೆ ಸುಜಾತಾ ಅವರು ಯಾವುದನ್ನು (ಕಾರಣವನ್ನು) ಆಯ್ಕೆ ಮಾಡಿಕೊಳ್ಳುತ್ತಾರೆ ?

(A) ಕೆರೆಯ ಗಲೀಜಾದ ನೀರು, ಅದರಲ್ಲಿಯೇ ದನಗಳ ಸ್ನಾನ, ಬಟ್ಟೆ ಒಗೆಯುವುದು ಮುಂತಾದವು. . .

(B) ಕೆರೆ ತುಂಬಾ ಸುಂದರವಾಗಿದೆ

(C) ಹಳ್ಳಿಯ ಜನರು ತುಂಬಾ ಜಾಣರು

(D) ಕೆರೆಯ ಸುತ್ತಲೂ ಗಿಡಮರಗಳು ಹೆಚ್ಚಾಗಿವೆ



Unnati Educations
9899436384, 9654279279

(v) ಈ ಪತ್ರದ ತೀರ್ಮಾನಕ್ಕೆ ಸರಿಯಾದ ಮತ್ತು ನ್ಯಾಯ ದೊರಕಿಸುವಂತಹ ಆಯ್ಕೆಯನ್ನು ಮಾಡಿರಿ.

- ನನ್ನ ಅಭಿಪ್ರಾಯದಲ್ಲಿ ಮಾಧ್ಯಮಗಳು ಹಳ್ಳಿಗರನ್ನು ಜಾಗೃತಗೊಳಿಸಿ, ಬಹಳ ಮಹತ್ವದ ಪಾತ್ರವಹಿಸುತ್ತವೆ.
- ನನ್ನ ಆಲೋಚನೆಗಳು ದಿನಪತ್ರಿಕೆಯಲ್ಲಿ ಪ್ರಕಟಗೊಂಡರೆ ಇದರಿಂದ ಹಳ್ಳಿಗರಲ್ಲಿ ಜಾಗೃತಿಯಾಗಿ ಸ್ವಚ್ಛತೆಗೆ ಮಾರ್ಗವಾಗುವುದು
- ದಯವಿಟ್ಟು ನನ್ನ ವಿಚಾರಗಳನ್ನು ನಿಮ್ಮ ದಿನಪತ್ರಿಕೆಯಲ್ಲಿ ಪ್ರಕಟಿಸುತ್ತೀರಿ ಎಂಬ ಭರವಸೆ ಇದೆ ಸಂಬಂಧಪಟ್ಟ ಅಧಿಕಾರಿಗಳು ಮುಂದಿನ ಕ್ರಮ ತೆಗೆದುಕೊಳ್ಳಬಹುದು.

| | |
|---|---|
| (A) ಹೌದು, ಆಯ್ಕೆಗೆ | (1) ಏಕೆಂದರೆ ಅಧಿಕಾರದ ಮಾತಾಗಿದೆ |
| (B) ಇಲ್ಲ, ಆಯ್ಕೆಗೆ | (2) ಏಕೆಂದರೆ ಅಪೂರ್ಣ ಮಾಹಿತಿ ಇದಾಗಿದೆ |
| (C) ಹೌದು, ಆಯ್ಕೆಗೆ | (3) ವಿನಂತಿ, ಹಳ್ಳಿಗರ ಜಾಗೃತಿ, ಭರವಸೆಯನ್ನು ಹೊಂದಿದೆ |

**5.** ಈ ಕೆಳಗೆ ಕೊಟ್ಟಿರುವ ಸಾಲುಗಳನ್ನು ಪರಾಮರ್ಶಿಸಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ. **4x1=4**

ಏರ್‌ಟೆಲ್ ಟಾವರ್ ಸಂಸ್ಥೆಯವರು ಒಂದು ದಿನದ ಮಟ್ಟಿಗೆ ಧ್ವನಿ ಸ್ಪಷ್ಟತೆಗೆ 'ಪ್ರಮುಖ ದುರಸ್ತಿ' ಕಾಮಗಾರಿ ನಡೆಸಬೇಕಾಗಿರುವದರಿಂದ "ಒಂದು ದಿನ" ಟಾವರ್ ಆಫ್ ಆಗುವ ಸೂಚನೆಯನ್ನು ಏಪ್ರಿಲ್–25 ರಂದು ನೀಡಿರುತ್ತಾರೆ. ಇದು 12 ಗಂಟೆಯ ಅವಧಿಗೆ ಸಂಬಂಧಿಸಿದ ಸೂಚನೆಯಾಗಿರುತ್ತದೆ.

(ಬೆಳಿಗ್ಗೆ 6 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೆ ಟಾವರ್ ಆಫ್ ಇರುತ್ತದೆ.)

(i) ಮೇಲ್ಕಂಡ ವಾಕ್ಯವೃಂದಕ್ಕೆ ಸೂಕ್ತ ತಲೆಬರಹ ಆರಿಸಿ.

(A) ಮಾಹಿತಿ ಇರಲಿ

(B) ಬೇರೆ ಟಾವರ್ ಬಳಸಿಕೊಳ್ಳಿ

(C) ಒಂದು ದಿನ ಏರ್‌ಟೆಲ್ ಟಾವರ್ ಆಫ್

(D) ಸುಂದರ ಟಾವರ್

**ಅಥವಾ**

ಮೇಲ್ಕಂಡ ವಿಷಯಕ್ಕೆ ಸರಿಯಾದ ಸೂಚನೆಯನ್ನು ಗುರುತಿಸಿ.

(A) ನಿಮಗೆ ತಿಳಿದಿರಲಿ (B) ಸಹಕರಿಸಲು ವಿನಂತಿಸಲಾಗಿದೆ

(C) ಸಿದ್ಧರಾಗಿರಿ (D) ನೀವು ಬೇರೆ ನೆಟ್‌ವರ್ಕ್‌ಗೆ ಹೋಗಬೇಕು

(ii) ಟಾವರ್ ಆಫ್ ಮಾಡಲು ಕಾರಣ :

(A) ಕೆಲಸಗಾರರು ಇಲ್ಲ (B) ವಿದ್ಯುತ್ ಕೊರತೆ

(C) ಟಾವರ್ ಬಿದ್ದಿದೆ (D) ಧ್ವನಿ ಸ್ಪಷ್ಟತೆಗಾಗಿ

(iii) ಟಾವರ್ ಆಫ್ ಮಾಡುವ ಸಮಯ :

(A) 12 ಗಂಟೆಗಳು (B) 6 ಗಂಟೆಗಳು

(C) 24 ಗಂಟೆಗಳು (D) 6 ಗಂಟೆ 10 ನಿಮಿಷ



Unnati Educations
9899436384, 9654279279

(iv) ಮೊಬೈಲ್ ಫೋನ್ ಟಾವರ್‌ಗಳಿಂದಾಗುವ ಹಾನಿ :

(A) ವಾಹನಗಳಿಗೆ ತೊಂದರೆ (B) ವೃದ್ಧರಿಗೆ ತೊಂದರೆ

(C) ಪಕ್ಷಿಗಳ ಸಂತತಿ ಕ್ಷೀಣಿಸುತ್ತಿದೆ (D) ಪ್ರಾಣಿಗಳಿಗೆ ಭಯ

6. ಕೆಳಗಿನ ವ್ಯಕ್ತಿ ಚಿತ್ರಣವನ್ನು ಗಮನಿಸಿ, ಸರಿಯಾಗಿ ಓದಿ, ಕೊಟ್ಟ ಪ್ರಶ್ನೆಗಳಿಗೆ ಉತ್ತರಿಸಿರಿ. **(4ಕ್ಕೆ)** **4x1=4**

ಭಾರತರತ್ನ ಮೋಕ್ಷಗುಂಡಮ್ ವಿಶ್ವೇಶ್ವರಯ್ಯ ಅವರು ಕ್ರಿ.ಶ. 1860 ಸೆಪ್ಟೆಂಬರ್ 15 ರಂದು ಜನಿಸಿದರು. ತಂದೆ ಶ್ರೀನಿವಾಸ ಶಾಸ್ತ್ರಿ ತಾಯಿ ವೆಂಕಟ ಲಕ್ಷ್ಮಮ್ಮ. ವಿಶ್ವೇಶ್ವರಯ್ಯನವರ ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ ನಡೆಯಿತು. ಇಂಜಿನೀಯರಿಂಗ್ ಪದವಿ ತೆಗೆದುಕೊಂಡು ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಇಂಜಿನೀಯರ್ ಆಗಿ ಸೇವೆ ಪ್ರಾರಂಭಿಸಿದರು. ಪೂನಾದ ಮೂಸಾ ಕಾಲುವೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂ ಚಾಲಿತ ಬಾಗಿಲನ್ನು ಅಳವಡಿಸಿದರು. ಇದು ಅವರದೇ ಅನ್ವೇಷಣೆ. ಮೈಸೂರಿನ ಕೃಷ್ಣರಾಜಸಾಗರ ಜಲಾಶಯಕ್ಕೂ ಅಳವಡಿಸಿದರು. ಸೇತುವೆ ಕಟ್ಟುವ ಕೆಲಸವಲ್ಲದೆ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿದರು.

ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸಿದರು. ಅವರ ಮೈಸೂರಿನ ಆಡಳಿತ ರೀತಿಯನ್ನು ಗಾಂಧೀಜಿಯವರು ಹೊಗಳಿದರು. "ಮೈಸೂರು ಮಾದರಿ" ಎಂಬ ಹೊಸ ಆಡಳಿತ ಪ್ರಾರಂಭವಾಯಿತು. 'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಗಾದೆಮಾತಿನಂತೆ ಬೆಳೆದ ವಿಶ್ವೇಶ್ವರಯ್ಯ ಅವರಿಗೆ ಬ್ರಿಟಿಷ್ ಸರ್ಕಾರ "ಸರ್" ಪದವಿ ನೀಡಿ ಗೌರವಿಸಿತು.

(i) ವಿಶ್ವೇಶ್ವರಯ್ಯನವರ ತಾಯಿಯ ಹೆಸರು ಏನು ?

(A) ಲಕ್ಷ್ಮಮ್ಮ (B) ವೆಂಕಟ ಲಕ್ಷ್ಮಮ್ಮ

(C) ವೆಂಕಟಮ್ಮ (D) ಇವು ಯಾವುವೂ ಅಲ್ಲ

(ii) ವಿಶ್ವೇಶ್ವರಯ್ಯನವರ ಪ್ರಾಥಮಿಕ ಶಿಕ್ಷಣ ಎಲ್ಲಿ ನಡೆಯಿತು ?

(A) ಬಳ್ಳಾಪುರ (B) ಮೈಸೂರು

(C) ದೊಡ್ಡಬಳ್ಳಾಪುರ (D) ಚಿಕ್ಕಬಳ್ಳಾಪುರ

(iii) ವಿಶ್ವೇಶ್ವರಯ್ಯನವರು ಸಹಾಯಕ ಇಂಜಿನೀಯರ್ ಆಗಿ, ಯಾವ ಇಲಾಖೆಯಲ್ಲಿ ಸೇವೆ ಪ್ರಾರಂಭಿಸಿದರು ?

(A) ಕಂದಾಯ (B) ಲೋಕೋಪಯೋಗಿ

(C) ಉಪಯೋಗಿ (D) ಸಾರ್ವಜನಿಕ

(iv) ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ಯಾರು ನೇಮಿಸಿದರು ?

(A) ಒಡೆಯರು (B) ಕೃಷ್ಣರಾಜರು

(C) ಸಂಸ್ಥಾನದವರು (D) ನಾಲ್ವಡಿ ಕೃಷ್ಣರಾಜ ಒಡೆಯರು

(v) "ಆಡುಮುಟ್ಟದ ಸೊಪ್ಪಿಲ್ಲ" ಈ ಗಾದೆಯ ಅರ್ಥ :

(A) ಆಡು ಸೊಪ್ಪನ್ನು ಮುಟ್ಟುವದಿಲ್ಲ (B) ಎಲ್ಲಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವಿಕೆ

(C) ಕಾರ್ಯಮಾಡುವುದು (D) ಆಡು ಸೊಪ್ಪನ್ನು ತಿನ್ನುವುದಿಲ್ಲ



**Unnati Educations**
**9899436384, 9654279279**

7. ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಅರ್ಥಪೂರ್ಣವಾಗಿ ಬಳಸಿರಿ. (3ಕ್ಕೆ) 3x1=3

(i) ಸ್ವಾಭಿಮಾನ (ii) ಧೈರ್ಯ

(iii) ನೆರವು (iv) ಪ್ರಾರ್ಥಿಸು

**ಅಥವಾ**

ಕೆಳಗಿನ ಪದಗಳನ್ನು ಅರ್ಥಪೂರ್ಣವಾಗಿ ಕ್ರಮಪಡಿಸಿ ಬರೆಯಿರಿ. (3ಕ್ಕೆ)

(i) ಮಗುವೂ ಆಕೆಯ ಪ್ರತಿಯೊಂದು ಹೂವು ಸಹನೆಯ

(ii) ಪರಮಧರ್ಮ ಎಂದು ಅಹಿಂಸೆಯೇ ಹೇಳಿದ್ದಾರೆ ಹಿರಿಯರು

(iii) ತಪ್ಪಿಲ್ಲ ಗಂಡನಿಗೆ ಇದಿರಾಡಿದರೆ ಹೆಂಡತಿ

(iv) ಹೆಣ್ಣು ಮಕ್ಕಳ 'ಚರಕ' ವಿಷ್ಣು ಚಕ್ರ ಬಡಕೂಲಿ ಪಾಲಿನ

8. ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ. 3x1=3

(i) ಪುಷ್ಪ + ಅಂಜಲಿ (ii) ದೇವ + ಆಲಯ (iii) ಲೋಕ + ಏಕ

**ಅಥವಾ**

ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.

(i) ಪೂಜೆಯಲ್ಲಿ (ii) ದುಗುಡವನ್ನು (iii) ಸದುತ್ತರ

9. ಬಿಟ್ಟಿರುವ ಸ್ಥಳಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. 3x1=3

(i) ಕಾಯಿಲೆ ಭಯವನ್ನು ಹೆಚ್ಚಿಸುವುದು __________.

(ವಿಜ್ಞಾನ, ಸುಜ್ಞಾನ, ಅಜ್ಞಾನ)

(ii) ಕ್ಷಯ ರೋಗಕ್ಕೆ __________ ತಿಂಗಳು ಔಷಧಿ ಸೇವಿಸಬೇಕು.

(20 ತಿಂಗಳು, 18 ತಿಂಗಳು, 5 ತಿಂಗಳು)

(iii) 'ಇತ್ಯಾದಿ' ಎಂಬುದು __________ ಸಂಧಿಗೆ ಉದಾಹರಣೆ.

(ಗುಣಸಂಧಿ, ಯಣ್‌ಸಂಧಿ, ಆದೇಶಸಂಧಿ)

10. ಕೆಳಗಿನ ವಾಕ್ಯಗಳನ್ನು ಓದಿ, ಸೂಚಿಸಿರುವಂತೆ ಬರೆಯಿರಿ. 4x1=4

(i) ಸಕ್ಕರೆ ಕಾಯಿಲೆ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ.

( ಕ್ರಿಯಾಪದವನ್ನು ಆರಿಸಿ ಬರೆಯಿರಿ)

(ii) ಶ್ರೀ ಸಿದರಾವಯ ನಮ ರಾಜದ ಮುಖಮಂತಿಗಳು.

(ಶುದ್ಧರೂಪದಲ್ಲಿ ಬರೆಯಿರಿ)



Unnati Educations
9899436384, 9654279279

(iii) ಸರೋವರದಲ್ಲಿ ಕೆಂಪು ತಾವರೆ ಅರಳಿದೆ.

(ಗುಣವಾಚಕ ಪದವನ್ನು ಗುರುತಿಸಿ ಬರೆಯಿರಿ)

(iv) ಊರೂರು : ದ್ವಿರುಕ್ತಿ :: ಪತಿ ಪತ್ನಿ __________

**11.** ಕೆಳಗಿನ ವಾಕ್ಯಗಳಿಗೆ ಲೇಖನ ಚಿಹ್ನೆಗಳನ್ನು ಹಾಕಿರಿ. (2ಕ್ಕೆ) **2x1=2**

(i) ಅಬ್ಬ ತಾಜಮಹಲ ಎಷ್ಟು ಸುಂದರ

(ii) ರಾಮನೂ ಸೀತೆಯೂ ಕಾಡಿಗೆ ಹೋದರಾ

(iii) ನಿನ್ನ ತಂದೆಯ ಹೆಸರೇನು

**12.** ಬಿಟ್ಟ ಸ್ಥಳಗಳನ್ನು ಸೂಕ್ತಪದಗಳಿಂದ ತುಂಬಿರಿ. (3ಕ್ಕೆ) **3x1=3**

(i) 'ಪ್ರೀತಿ' ಇದರ ವಿರುದ್ಧ ಪದ

(ದ್ವೇಷ, ಸಂಪ್ರೀತಿ, ಪ್ರೇಮ, ಒಲವು)

(ii) 'ಶೂನ್ಯ'ದ ತದ್ಭವ ರೂಪ __________.

(ಸೂನ, ಶೂನ, ಸೊನ್ನೆ, ಜೀರೊ)

(iii) ಹೂವು + ಆಗು ಇದನ್ನು ಕೂಡಿಸಿ ಬರೆದಾಗ ಆಗುವ ರೂಪ __________.

(ಹೂಯಾಗು, ಹೀಯಾಗು, ಹೂವಾಗು, ಹೇವಾಗು)

(iv) 'ಪ್ರಿಯ' ಇದರ ವಿರುದ್ಧ ಪದ __________.

(ನಿಷ್ಪ್ರೀಯ, ಪ್ರೇಮ, ನಿಪ್ರಿಯ, ಅಪ್ರಿಯ)

**13.** ಸರಿ/ತಪ್ಪು ತಿಳಿಸಿರಿ. (3ಕ್ಕೆ) **3x1=3**

(i) ಅಹಿಂಸೆಯ ಪಾಠ ಗಾಂಧೀಜಿಗೆ ಅವರ ಹೆಂಡತಿಯಿಂದ ದೊರೆಯಿತು.

(ii) ಸೀತೆ ತನ್ನ ಗಂಡನಾದ ರಾಮನಿಗೆ ಇದಿರಾಡಿದವಳಲ್ಲ.

(iii) ಗಾಂಧೀಜಿಯವರ ಬಾಳು ಸೋತವರ ಗೆಲುವಿಗಾಗಿ ಇತ್ತು.

(iv) 'ಮಹಿಳಾ ಅಭ್ಯುದಯ' ಈ ಪಾಠವನ್ನು ಕುವೆಂಪು ಬರೆದಿದ್ದಾರೆ.

**14.** ಈ ಕೆಳಗಿನ ಗದ್ಯಭಾಗವನ್ನು ಓದಿ ಬಿಟ್ಟ ಸ್ಥಳ ತುಂಬಿರಿ. (3ಕ್ಕೆ) **3x1=3**

ನೀರು ಹಾವೊಂದು ದೊಡ್ಡ ಡೊಂಗರು ಕಪ್ಪೆಯನ್ನು ಹಿಡಿದು ನುಂಗಲು ಪ್ರಯಾಸ ಪಡುತ್ತಿತ್ತು. ತನ್ನ ಬಾಯಿಯ ಉದ್ದಗಲಗಳ ಪರಿವೆ ಇಲ್ಲದೆ ಆ ಹಾವು ಸುಮಾರು ಒಂದು ಕೆ.ಜಿ ತೂಕದ ಈ ದಡಿಯ ಕಪ್ಪೆಯನ್ನು ಹಿಡಿದಿತ್ತು. ಕಪ್ಪೆಗಾಳಿಯನ್ನು ನುಂಗಿ ಹೊಟ್ಟೆಯನ್ನು ಫುಟ್‌ಬಾಲ್ ರೀತಿ ಊದಿಸಿ ನೀರಾವು ಅದನ್ನು ನುಂಗಲು ಅಸಾಧ್ಯವಾಗುವಂತೆ ಮಾಡಿ, ಅಯ್ಯಯ್ಯೋ ಎಂದು ಒಂದೇ ಸಮನೆ ಕೂಗುತ್ತಿತ್ತು.

(i) ಹಾವೊಂದು ದೊಡ್ಡ __________ ಕಪ್ಪೆಯನ್ನು ಹಿಡಿದಿತ್ತು.

(ii) ಕಪ್ಪೆಯ ತೂಕ __________ ಇತ್ತು.

(iii) ಕಪ್ಪೆ ಗಾಳಿಯನ್ನು ನುಂಗಿ ಹೊಟ್ಟೆಯನ್ನು __________ ಊದಿಸಿತ್ತು.

(iv) ಕಪ್ಪೆ ಅಯ್ಯಯ್ಯೋ ಎಂದು __________ ಕೂಗುತ್ತಿತ್ತು.



Unnati Educations
9899436384, 9654279279

15. ಕೆಳಗಿನ ಗದ್ಯಭಾಗವನ್ನು ಓದಿ, ಕೆಳಗಿರುವ ವಾಕ್ಯಗಳು ಸರಿ ಅಥವಾ ತಪ್ಪು ಎಂಬುದನ್ನು ಬರೆಯಿರಿ. (3ಕ್ಕೆ) **3x1=3**

ಮೂಡಣ ದಿಕ್ಕು ಕೆಂಪೇರಿ, ಕತ್ತಲ ತೆರೆ ಸರಿದು, ಹಕ್ಕಿಗಳು ಚಿಲಿಪಿಲಿಗುಟ್ಟಿ ತಂಗಾಳಿ ಬೀಸಿ ಬರುವ ಸಮಯ. ಬೆಳಗಲಿ ಬೆಳಕು ಹರಿಯಿತೆಂದೊಡೆ ಜೀವ ಜಗತ್ತು ನಿದ್ರೆಯ ತೆಕ್ಕೆಯಿಂದ ಬಿಡಿಸಿಕೊಂಡು ಕ್ರಿಯಾಶೀಲವಾಗುತ್ತದಲ್ಲವೇ ? ಇಂಥ ಸುಂದರ ಬೆಳಗಿನಲ್ಲಿ ನೀವಾದರೆ ಏನು ಮಾಡುತ್ತೀರಿ ? ಎಚ್ಚರವಿದ್ದುಕೊಂಡೇ ಕಣ್ಣು ಮುಚ್ಚಿ, ಇನ್ನೂ ಸ್ವಲ್ಪ ಸಮಯ ಹೊರಳಾಡುತ್ತೀರಾ ? ಅಥವಾ ಆಲಸ್ಯದಿಂದ ಹೊದಿಕೆಯೊಳಗೇ ಬೆಚ್ಚಗೆ ಹುದುಗಿಕೊಂಡು ಮರಿ ನಿದ್ರೆ ಮಾಡಿಯೇ ಬಿಡುತ್ತೀರಾ ? ಕವಿಗಳು ತಮ್ಮ ವಿದ್ಯಾರ್ಥಿ ಜೀವನವನ್ನು ನೆನಪು ಮಾಡಿಕೊಳ್ಳುತ್ತಿದ್ದಾರೆ ಬೆಳಗಿನ ಜಾವ ಏಳುವುದು ಇಲ್ಲಿ ಅವರಿಗೆ ಕಷ್ಟದಾಯಕವಾಗಿತ್ತು.

(i) ಜೀವಜಗತ್ತು ನಿದ್ರೆಯ ತೆಕ್ಕೆಯಿಂದ ಬಿಡಿಸಿಕೊಂಡು ಕ್ರಿಯಾಶೀಲವಾಗುವುದಿಲ್ಲ.

(ii) ಮೂಡಣ ದಿಕ್ಕು ಕೆಂಪೇರಿದಾಗ ತಂಗಾಳಿ ಬೀಸಿ ಬರುವ ಸಮಯ.

(iii) ಮೂಡಣ ದಿಕ್ಕು ಕೆಂಪೇರಿ, ಕತ್ತಲ ತೆರೆ ಸರಿದಾಗ ಹಕ್ಕಿಗಳು ಚಿಲಿಪಿಲಿಗುಟ್ಟುತ್ತವೆ.

(iv) ಬೆಳಗಿನ ಸಮಯ ಸುಂದರವಾಗಿರುತ್ತದೆ.

16. ಹೊಂದಿಸಿ ಬರೆಯಿರಿ : **3x1=3**

| | ಅ | | ಆ |
|---|---|---|---|
| (a) | ವೈರ | (i) | ಕಂಬ |
| (b) | ಸ್ತಂಭ | (ii) | ಸಂತೋಷ |
| (c) | ಮುದ | (iii) | ಹಗೆತನ |

ಈ ಕೆಳಕಂಡ ಗದ್ಯಭಾಗವನ್ನು ಓದಿ, ಪ್ರಶ್ನೆಗಳಿಗೆ ಉತ್ತರಿಸಿರಿ.

ನಾಟಕದಲ್ಲಿ ಬರುವ ಪಾತ್ರಗಳು ನಮ್ಮ ಮನಸ್ಸನ್ನು ಆಕರ್ಷಿಸುತ್ತವೆ. ಮನುಷ್ಯ ಒಂದು ಸಾರಿ ತಪ್ಪು ಮಾಡಿದರೆ ಅದರ ಫಲವನ್ನು ಹೇಗೆ ಅನುಭವಿಸಬೇಕಾಗುತ್ತದೆ ಎಂಬುದಕ್ಕೆ ರಾವಣನ ಪಾತ್ರವೇ ಸಾಕ್ಷಿ. ಅವನಿಗೆ ತನ್ನ ತಪ್ಪಿನ ಅರಿವಾದರೂ ಸರಿಪಡಿಸಿಕೊಳ್ಳಲಾರದ ಸ್ಥಿತಿಗೆ ತಲುಪಿರುತ್ತಾನೆ. ದೈವಭಕ್ತನೂ ಶೂರನೂ ಆದ ರಾವಣ ತನ್ನ ತಂಗಿ ಶೂರ್ಪನಖಿಗೆ ಆದ ಅವಮಾನದಿಂದಾಗಿ ಸೀತೆಯನ್ನು ಅಪಹರಿಸುತ್ತಾನೆ ಮಂಡೋದರಿಯ ಮಾತಿನಂತೆ ಸೀತೆಯನ್ನು ರಾಮನಿಗೆ ಒಪ್ಪಿಸುವ ಮನಸ್ಸಿದ್ದರೂ ಶೂರನಾದ ತಾನು ರಾಮನನ್ನು ಯುದ್ಧದಲ್ಲಿ ಗೆಲ್ಲುವ ಆತ್ಮ ವಿಶ್ವಾಸದಿಂದಿರುತ್ತಾನೆ. ನಂತರ ಸೀತೆಯನ್ನು ರಾಮನಿಗೆ ಒಪ್ಪಿಸುವುದಾಗಿ ಮಂಡೋದರಿಗೆ ಮಾತು ಕೊಡುತ್ತಾನೆ. ಘಟನೆಗಳು ರಾವಣನ ನಿರೀಕ್ಷೆಯಂತೆ ಸಾಗುವುದಿಲ್ಲ. ಸಾಯುವ ವೇಳೆಗೆ ರಾವಣ ಪಶ್ಚಾತ್ತಾಪದಿಂದ ನೊಂದಿರುತ್ತಾನೆ. ಸೀತೆಯನ್ನು ಹೊಗಳುತ್ತಾನೆ ತನ್ನ ಭಂಡಾರದ ಕಾಲು ಭಾಗವನ್ನು ಸೀತೆಗೆ ಕೊಡುವಂತೆ ವಿಭೀಷಣನಿಗೆ ಹೇಳುತ್ತಾನೆ. ಪಶ್ಚಾತ್ತಾಪದಿಂದ ಸಾಯುತ್ತಾನೆ ಯೋಧನಿಗೆ ಒಪ್ಪುವ ರೀತಿಯಲ್ಲಿ ರಣರಂಗದಲ್ಲಿ ಮರಣ ಹೊಂದುತ್ತಾನೆ.

ಕವಿ ಸಿ.ಕೆ. ವೆಂಕಟರಾಮಯ್ಯ ಅವರು ಜನಪ್ರಿಯ ರಾಮಾಯಣವನ್ನು ಆಧರಿಸಿ ಹೊಸ ಆಲೋಚನೆಗಳಿಂದ ಬರೆದಿದ್ದಾರೆ. ಮನುಷ್ಯ ಸದಾ ಕ್ರೂರಿಯೇ ಆಗಿರುವುದಿಲ್ಲ. ಎಲ್ಲವೂ ವಿಧಿ ಲಿಖಿತ ಎಂದು ಕೈಕಟ್ಟಿ ಕೂರಬಾರದು. ಮನುಷ್ಯನ ಪ್ರಯತ್ನಕ್ಕೂ ಬೆಲೆ ಇದೆ ಎಂಬುದನ್ನು ಹೇಳಲು ಪ್ರಯತ್ನ ಪಟ್ಟಿದ್ದಾರೆ. ರಾವಣ ಪಶ್ಚಾತ್ತಾಪದಲ್ಲಿ ಬೆಂದು ಸಾಯುವ ವೇಳೆಗೆ ಪರಿಶುದ್ಧನಾಗುತ್ತಾನೆ ಎನ್ನುವುದು ನಾಟಕಕಾರನ ಆಶಯವಾಗಿದೆ.



Unnati Educations
9899436384, 9654279279

17. ರಾವಣನ ಪಾತ್ರ ಯಾವುದಕ್ಕೆ ಸಾಕ್ಷಿ ? 2

**ಅಥವಾ**

18. ರಾವಣ ಯಾವ ಸ್ಥಿತಿಗೆ ತಲುಪಿರುತ್ತಾನೆ ?

19. ರಾವಣ ಸೀತೆಯನ್ನು ಏಕೆ ಅಪಹರಿಸುತ್ತಾನೆ ? 2

**ಅಥವಾ**

20. ರಾವಣ ವಿಭೀಷಣನಿಗೆ ಏನು ಹೇಳುತ್ತಾನೆ ?

21. ಈ ನಾಟಕ ಭಾಗವನ್ನು ಯಾರು ಬರೆದಿದ್ದಾರೆ ? ನಾಟಕಕಾರನ ಆಶಯವೇನು ? 2

22. ಕೆಳಕಂಡ ಪದಗಳ ಅರ್ಥ ಬರೆಯಿರಿ. 2

(i) ಅರಿವು (ii) ಮರಣ

23. ನೀವು ಭಾನುಪ್ರಕಾಶ/ಭಾನುಜಾ ಊರು ಹುಲಕೋಟಿ ಎಂದು ಭಾವಿಸಿ ನಿಮ್ಮ ಊರ ರಸ್ತೆ ದುರಸ್ತಿಗಾಗಿ ವಿನಂತಿಸಿ, ಪೌರಾಯುಕ್ತರು ಮಹಾನಗರ ಪಾಲಿಕೆ ಧಾರವಾಡ ಇವರಿಗೆ ಪತ್ರ ಬರೆಯಿರಿ. 4

**ಅಥವಾ**

ನೀವು ಯೋಗೇಶ, ತಂದೆ ಮಲ್ಲಪ್ಪ ಊರು ಬದಾಮಿ ಬಿ.ಎಸ್‌ಸಿ. ಪದವೀಧರರು ಎಂದು ಭಾವಿಸಿ, ಶಾಖಾಧಿಕಾರಿಗಳು ಭಾರತೀಯ ಜೀವವಿಮಾ ನಿಗಮ ಇಲ್ಲಿ ಖಾಲಿ ಇರುವ 'ಹಿರಿಯ ಸಹಾಯಕ' ಹುದ್ದೆಗೆ ಪೂರ್ಣ ವಿವರದೊಂದಿಗೆ ಅರ್ಜಿ ಸಲ್ಲಿಸಿರಿ.

24. ಕೆಳಗಿರುವ ದೂರವಾಣಿ ಸಂಭಾಷಣೆಯನ್ನು ಓದಿ, ಸಂಕ್ಷಿಪ್ತವಾಗಿ ವಿಷಯದ ಮಾಹಿತಿಯನ್ನು ಬರೆಯಿರಿ. 2

| | | |
|---|---|---|
| ಕಿರಣ | : | ಹಲೋ, ವಿನಯ ಹೇಗಿದ್ದಿಯಾ ? ಪರೀಕ್ಷೆ ಸಮೀಪದಲ್ಲಿದೆ. ಅಭ್ಯಾಸ, ಪರೀಕ್ಷೆ ತಯಾರಿ ಹೇಗಿದೆ ? |
| ವಿನಯ | : | ಹಾಂ ಕಿರಣ ಚೆನ್ನಾಗಿದ್ದೇನೆ, ಪರೀಕ್ಷೆ ತಯಾರಿ ಚೆನ್ನಾಗಿ ನಡೆದಿದೆ. ಮುಖ್ಯವಾಗಿ ನಾನು 'ಪ್ರತಿಭಾನ್ವೇಷಣೆ' ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ. |
| ಕಿರಣ | : | ಓ ತುಂಬಾ ಸಂತೋಷ, ನೀನು ನಿನ್ನ ಯಾವ ಪ್ರತಿಭೆಯನ್ನು ತೋರಿಸುತಾ ಮಾತನಾಡಲಿಕ್ಕೆ ಇದ್ದೀ ? ಹೇಳು. |
| ವಿನಯ | : | ಪ್ರತಿಭಾನ್ವೇಷಣೆ ಕಾರ್ಯಕ್ರಮದಲ್ಲಿ ಬೇರೆ ಬೇರೆ ಶಾಲೆಗಳಿಂದ ವಿದ್ಯಾರ್ಥಿಗಳು ಬರಲಿದ್ದಾರೆ. ನಾನು 'ಹಳ್ಳಿ ಜೀವನ' ಈ ವಿಷಯದ ಬಗ್ಗೆ ಮಾತನಾಡಲಿದ್ದೇನೆ ನೀನು ಸಾಧ್ಯವಾದರೆ ಭಾಗವಹಿಸು. ಜಿಲ್ಲಾ ಕ್ರೀಡಾಂಗಣದಲ್ಲಿ ಕಾರ್ಯಕ್ರಮವಿದೆ. |
| ಕಿರಣ | : | ಪ್ರಯತ್ನಿಸುವೇ. ಹಳ್ಳಿಗರ ಅನುಕೂಲತೆ ಅನಾನುಕೂಲತೆಗಳ ಬಗ್ಗೆ ಮಾತನಾಡು ಒಳ್ಳೆಯದಾಗಲಿ. ಬಾಯ್. |
| ವಿನಯ | : | ಓಕೆ. ಧನ್ಯವಾದ ಮತ್ತೆ ಮಾತಾಡ್ತೀನಿ. |
| ಕಿರಣ | : | ಸರಿ, ಹಾಗೇ ಆಗ್ಲಿ. |



Unnati Educations
9899436384, 9654279279

25. 'ಆಟೋಟಗಳ ಮಹತ್ವ' ಈ ವಿಷಯವನ್ನು ಕುರಿತು 10 ಸಾಲುಗಳಷ್ಟು ಒಂದು ವಾಕ್ಯ ವೃಂದವನ್ನು ರಚಿಸಿ. 6

**ಅಥವಾ**

"ಕೋವಿಡ್–19 ರ ಕಷ್ಟ–ಸಂಕಷ್ಟ, ಲಾಭ–ಹಾನಿಗಳು" ಕುರಿತು ಕೆಳಗಿನ ಸುಳುಹುಗಳನ್ನು ಉಪಯೋಗಿಸಿಕೊಂಡು ಪ್ರಬಂಧವನ್ನು ಬರೆಯಿರಿ.

(i) 2019 ರಿಂದ 2022 ಈ ವರ್ಷಗಳಲ್ಲಿ ಕೊರೊನಾದ ಅಟ್ಟಹಾಸ.

(ii) 2021ನೇ ಸಾಲಿನ ಎರಡನೇ ಅಲೆಯಲ್ಲಿ ಹೆಚ್ಚು ಸಾವು–ನೋವು.

(iii) ಭಯಪಟ್ಟು ಸತ್ತವರ ಸಂಖ್ಯೆಹೆಚ್ಚು, ಆಸ್ಪತ್ರೆಗಳಲ್ಲಿ ಬೆಡ್ ಸಮಸ್ಯೆ.

(iv) ಶವಸಂಸ್ಕಾರ ಸಂದರ್ಭದಲ್ಲಿ ಸಂಬಂಧಿಗಳು ಹಾಜರಾಗದ ಸ್ಥಿತಿ.

(v) ಆರ್ಥಿಕವಾಗಿ ಹಾನಿ, ವಿದ್ಯಾರ್ಥಿಗಳಿಗೆ ಶಾಲೆಗೆ ಹೋಗಲು ತೊಂದರೆ.

(vi) ಲಾಭವೆಂದರೆ ಕುಟುಂಬದವರು ಒಟ್ಟಾಗಿ ಇರುವಿಕೆ, ಸ್ವಚ್ಛತೆಗೆ ಮನಸ್ಸು ಮಾಡಿದರು.

(vii) ವಾಹನಗಳ ಓಡಾಟ ಕಡಿಮೆ ಇದ್ದದರಿಂದ ಪ್ರದೂಷಣ ಕಡಿಮೆ.

26. "ಗೀತಾಳ ಧ್ವನಿ ಕೋಗಿಲೆಯಂತೆ ಇರುವುದು" 2

ಈ ವಾಕ್ಯದಲ್ಲಿನ ಅಲಂಕಾರವನ್ನು ವಿವರಿಸಿ ಅಲಂಕಾರದ ಹೆಸರನ್ನು ಬರೆಯಿರಿ.

27. ಸಂಸ್ಕೃತ ಪದಕ್ಕೆ ಕನ್ನಡ ಪದ ಬರೆಯಿರಿ. (2ಕ್ಕೆ) 2x1=2

(i) ಭೂಮಿ (ii) ಹಂಸ (iii) ವಿಷ (iv) ರಾಕ್ಷಸ

28. ಕೆಳಗಿನ ಪದಗಳ ವಿಗ್ರಹವಾಕ್ಯಮಾಡಿ, ಸಮಾಸದ ಹೆಸರನ್ನು ಬರೆಯಿರಿ. (3ಕ್ಕೆ) 3x1=3

(i) ಇಂಚರ (ii) ಕೈನೋವು (iii) ಇಮ್ಮಡಿ (iv) ಈ ಪುಸ್ತಕ

29. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಇಲ್ಲಿ ದಾಖಲಾದ ಅಧ್ಯಯನ ಕೇಂದ್ರ ಸಂಖ್ಯೆಯನ್ನು ಕೊಡಲಾಗಿದೆ. ಅವುಗಳ ಸಹಾಯದಿಂದ ರೇಖಾ ಚಿತ್ರವನ್ನು ರಚಿಸಿರಿ. 4

**ವರ್ಷಗಳು ಹಾಗೂ ಅಧ್ಯಯನ ಕೇಂದ್ರಗಳು**

| ವರ್ಷ | 2010 | 2011 | 2012 | 2013 | 2014 | 2015 | 2016 | 2017 | 2018 | 2019 |
|---|---|---|---|---|---|---|---|---|---|---|
| ಅಧ್ಯಯನ ಕೇಂದ್ರಗಳು | 8 | 11 | 13 | 15 | 17 | 21 | 23 | 27 | 31 | 34 |



Unnati Educations
9899436384, 9654279279

**30.** ಕೆಳಗಿರುವ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿ ಬರೆಯಿರಿ. **4x1=4**

(i) ಹಳದಿ, ಧ್ವನಿ, ಬಿಳಿ, ಹಸಿರು

(ii) ಸೂರ್ಯ, ಭಾನು, ಆದಿತ್ಯ, ಬಾನು

(iii) ಗೌರೀಶ, ಶಂಕರ, ಷಣ್ಮುಖ, ಈಶ್ವರ

(iv) ಶಾಲೆ, ಹಳ್ಳಿ, ಬಳಪ, ತರಗತಿ

**31.** ಈ ಕೆಳಕಂಡ ಪ್ರಶ್ನೆಗಳಿಗೆ **ಒಂದು** ಅಥವಾ **ಎರಡು** ವಾಕ್ಯಗಳಲ್ಲಿ ಉತ್ತರಿಸಿರಿ. (3ಕ್ಕೆ) **3x2=6**

(a) ಕವಿ ಚೇತರಿಸಿಕೊಳ್ಳದೆ ತೊಂದರೆಯಲ್ಲಿದ್ದಾಗ ಕವಿ ಏನು ಮಾಡಿದರು ?

(b) ಬಾಳು ಯಾವುದರ ಮೇಲೆ ಆಧಾರಿತವಾಗಿದೆ ?

(c) ಕವಿ ಬೇಂದ್ರೆಯವರ ಪೂರ್ಣಹೆಸರೇನು ? ಅವರ ಎರಡು ಕೃತಿಗಳ ಹೆಸರು ಬರೆಯಿರಿ.

(d) ದೀರ್ಘಕಾಲ ಕಾಡಿಸಬಲ್ಲ ರೋಗಗಳು ಯಾವುವು ?

**32.** ಕೆಳಕಂಡ ಪ್ರಶ್ನೆಗಳಿಗೆ **3 - 4** ವಾಕ್ಯಗಳಲ್ಲಿ ಉತ್ತರಿಸಿರಿ. (2ಕ್ಕೆ) **2x3=6**

(a) ವಚನಕಾರರು "ಆಡುವ ಮಾತು" ಹೇಗಿರಬೇಕೆಂದು ತಿಳಿಸಿದ್ದಾರೆ ?

(b) "ಹೆಜ್ಜೇನು" ಇದನ್ನು ಪರಿಚಯಿಸಿ.

(c) "ಮನಸ್ಸಿನ ದುರ್ಬಲತೆ" ಕುರಿತು ಬರೆಯಿರಿ.

**33.** ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ **30** ರಿಂದ **40** ಪದಗಳಲ್ಲಿ ಉತ್ತರಿಸಿರಿ. **1x3=3**

(a) ಕಥಾನಾಯಕನ ವ್ಯಕ್ತಿತ್ವ ಕುರಿತು ಬರೆಯಿರಿ.

(b) ಪ್ರೀತಿಯ ವಿಶೇಷತೆಯನ್ನು ಸವಿತಾ ನಾಗಭೂಷಣ ಅವರು ಹೇಗೆ ಚಿತ್ರಿಸಿದ್ದಾರೆ ?

**- o 0 o -**



Unnati Educations
9899436384, 9654279279